# ಜ್ಞಾನಲೋಕ

ಜ್ಞಾನ ಉತ್ಕೃಷ್ಟವಾದದ್ದು. ಲೋಕದಲ್ಲಿ ಸಮಸ್ತ ಪಡಿಪದಾರ್ಥಗಳ ಬಾಹ್ಯ ಮತ್ತು ಆಂತರಿಕ ವಿಷಯಗಳನ್ನು ತಿಳಿಯಲು ಜ್ಞಾನದ ಅವಶ್ಯಕತೆ ಉಂಟು. ಇದು ಸ್ಥೂಲವಾಗಿ ಎರಡು ಬಗೆ: ಲೋಕಜ್ಞಾನ ಮತ್ತು ಜ್ಞಾನಲೋಕ. ಲೋಕಜ್ಞಾನವು ಇಂದ್ರಿಯಗಳ ಮೂಲಕ ತಿಳಿಯಲು ಸಾಧ್ಯ. ಆದರೆ, ಜ್ಞಾನಲೋಕವು ಇಂದ್ರಿಯಾತೀತವಾದ ಅನುಭವ. ಇವೆರಡರ ಅನುಭವಗಳನ್ನು ತಿಳಿಯಲು ನಮಗೆ ಪೂರ್ವಸಿದ್ಧತೆಗಳು ಬೇಕು. ಅವುಗಳಿಲ್ಲದೆ ಒಂದನ್ನೊಂದನ್ನು ನಾವು ತಿಳಿಯಲಾರೆವು. ಜ್ಞಾನಲೋಕದ ಅರಿವು ಬರಬೇಕಾದರೆ, ಲೋಕಜ್ಞಾನದ ತಿಳಿವು ನಮಗೆ ಬೇಕು. ಗೀತೆಯು ಹದಿನೆಂಟು ಅಧ್ಯಾಯಗಳನ್ನು ಒಳಗೊಂಡಿರುವುದು ನಮಗೆಲ್ಲಾ ತಿಳಿದ ಸಂಗತಿಯೇ. ಅವುಗಳನ್ನು ಮೂರು ಷಟ್ಕಗಳಾಗಿ ವಿಂಗಡಿಸಿರುವುದುಂಟು. ಇದು ಸ್ವಾರಸ್ಯದ ಸಂಗತಿ. ಮೊದಲ ಆರು ಅಧ್ಯಾಯಗಳು 'ಕರ್ಮಯೋಗ'ಕ್ಕೆ ಸಂಬಂಧಿಸಿದ್ದರೆ; ಅನಂತರದ ಆರು ಅಧ್ಯಾಯಗಳು (7 ರಿಂದ 12) 'ಜ್ಞಾನಯೋಗ'ಕ್ಕೆ ಸಂಬಂಧಿಸಿದೆ. ನಂತರದ ಮುಂದಿನ ಆರು ಅಧ್ಯಾಯಗಳು 'ಭಕ್ತಿಯೋಗ'ಕ್ಕೆ ಸಂಬಂಧಿಸಿವೆ. ಕರ್ಮ ಮತ್ತು ಭಕ್ತಿಗಳ ನಡುವೆ 'ಜ್ಞಾನ'ವು ವಿರಾಜಮಾನವಾಗಿದೆ. ಗೀತೆಯು ಹೇಳುವ 'ಜ್ಞಾನ' ಉತ್ಕೃಷ್ಟವಾದುದು. ಇದು ಐಂದ್ರಿಯ ಅನುಭವಗಳಿಂದ ಹೊರತಾದುದು. ಇದನ್ನು ಒಂದು ಉದಾಹರಣೆಯಿಂದ ತಿಳಿಯೋಣ. ದೂರದಲ್ಲಿ ಎಲೆಗಳು ಅಲ್ಲಾಡುತ್ತಿರುತ್ತವೆ ಅಂದುಕೊಳ್ಳಿ. ಅದು ನಮ್ಮ ಕಣ್ಣಿಗೆ ಗೊತ್ತಾಗುತ್ತದೆ. ಆದರೆ, ಎಲೆಗಳು ಅಲ್ಲಾಡಲು ಕಾರಣ ತಿಳಿಯುವುದಿಲ್ಲ. ನಮ್ಮ ಬುದ್ಧಿಯು ನಾನಾ ತರ್ಕಗಳನ್ನು ಹೂಡುತ್ತದೆ. ಅಲ್ಲೆಲ್ಲೊ ಕೋತಿ ಕುಳಿತು ಕೊಂಬೆಯನ್ನು ಅಲ್ಲಾಡಿಸುತ್ತಿರಬೇಕೆಂದು ತರ್ಕಿಸುತ್ತೇವೆ. ಹೀಗಾಗಿ, ಕಣ್ಣು, ಕಿವಿಗಳು ಗ್ರಹಿಸಿದ್ದು ಕೇವಲ ಬಾಹ್ಯತತ್ತ್ವದ ಮೇಲೆ. ಇದು ಅನಿಶ್ಚಯತೆಯ ಸಂಕೇತ. ತರ್ಕವು ಬಾಹ್ಯದ ಅನುಭವಗಳನ್ನು ಅವಲಂಬಿಸಿದೆ. ಹೀಗಾಗಿ ಇದು 'ಲೋಕಜ್ಞಾನ'ದ ಪ್ರತಿಮಾ ಸ್ವರೂಪಗಳಾಗಿವೆ.

ಜ್ಞಾನಲೋಕವು ಇಂದ್ರಿಯಾತೀತ ಎಂದು ಹೇಳಿದೆನಷ್ಟೆ. ಇಂದ್ರಿಯಗಳಿಂದ ತಿಳಿಯುವ ಸಂಗತಿಗಳೆಲ್ಲವೂ 'ಲೋಕಜ್ಞಾನ'ವೇ ಆಗಿದೆ. ಇದಕ್ಕಿಂತ ಭಿನ್ನವಾದದ್ದು ಜ್ಞಾನಲೋಕ. ಇದನ್ನು ನಾವು 'ಅಂತರ್ ಜ್ಞಾನ'ವೆಂದೂ ತಿಳಿಯಬಹುದು. ಈ ಸಂಗತಿಯನ್ನು ಒಂದು ಕಥಾನಕದ ಮೂಲಕ ತಿಳಿಯಲು ಯತ್ನಿಸೋಣ. ವ್ಯಾಸಭಾರತದಲ್ಲಿ 'ಏಕಲವ್ಯೋಪಖ್ಯಾನ' ಬರುತ್ತದೆಯಷ್ಟೆ. ಇಲ್ಲಿ ಏಕಲವ್ಯನು ದ್ರೋಣಾಚಾರ್ಯರನ್ನು ಪ್ರತೀಕವಾಗಿ ಇಟ್ಟುಕೊಂಡಿದ್ದಾನೆ. ಅವರನ್ನೇ ಗುರುವೆಂದು ಭಾವಿಸಿಕೊಂಡಿದ್ದಾನೆ. ಆ ಗುರುವಿನ ನಿರ್ದೇಶನದಲ್ಲಿ ಸಮಸ್ತ ಬಿಲ್ವಿದ್ಯೆಯನ್ನು ಆಂತರಂಗಿಕವಾಗಿ ತಿಳಿಯುತ್ತಾನೆ ಅಥವ ಆ ವಿದ್ಯೆಯ ಅನುಗ್ರಹಕ್ಕೆ ಅವನು ಪಾತ್ರನಾಗುತ್ತಾನೆ. ಸಾಮಾನ್ಯ ಗುರು ನೀಡುವ ವಿದ್ಯೆ ಲೌಕಿಕವಿದ್ಯೆ ಮಾತ್ರ. ಈ ಲೋಕಜ್ಞಾನವು ಪ್ರಾಥಮಿಕಸ್ತರದ್ದೇ ಹೊರತು; ಅದು ಜ್ಞಾನಲೋಕದ ಪರಮೋಚ್ಚ ಸ್ಥಿತಿಯನ್ನು ತಿಳಿಸುವುದಿಲ್ಲ. ಏಕಲವ್ಯನಿಗೆ ಒಲಿದು ಬಂದದ್ದು 'ಅಂತರ್‌ಜ್ಞಾನ'ದ ಮೂಲಬಿಂಬ. ಅದು ಏಕಲವ್ಯನನ್ನು ಅನಿತರ ಸಾಧಾರಣವಾಗಿಸಿತು. ಅವನು 'ಶಬ್ದವೇಧಿ' ಎಂಬ ಅಪೂರ್ವ ಕೌಶಲ್ಯಕ್ಕೆ ಪಾತ್ರನಾಗಲು ಇದರಿಂದ ಸಾಧ್ಯವಾಯಿತು.

ನಾವೀಗ ಅರ್ಜುನನ ಪಾತಾಳಿಯಲ್ಲಿ ನಿಂತಿದ್ದೇವೆ. ನಮ್ಮ ವಿದ್ಯೆಯು ನಿಜದ ನೆಲೆಯಲ್ಲಿ ನಿಂತಿಲ್ಲ. ನಾವು ಕಲಿತವಿದ್ಯೆಯು ಈರ್ಷ್ಯೆ, ಅಹಂಕಾರ, ಪ್ರಭುತ್ವದ ದಾಸ್ಯತನಕ್ಕೆ ಕಾರಣವಾಗಿದೆ. ಇದೀಗ ಅರ್ಜುನನ ಮನಃಸ್ಥಿತಿ ನಮ್ಮದಾಗಿದೆ. ಆದರೆ, ಏಕಲವ್ಯ ಏರಿದ ಎತ್ತರಕ್ಕೆ ನಾವು ಏರಬೇಕಾದರೆ, ಅರ್ಜುನನ ಮನಃಸ್ಥಿತಿಯಿಂದ ಮುಂದುವರಿಯಬೇಕಾಗುತ್ತದೆ. ಏಕಲವ್ಯ ಪಾತಳಿಯನ್ನು ಗಟ್ಟಿಯಾಗಿ ನಾವು ಹಿಡಿಯಬೇಕಾಗುತ್ತದೆ. ಇಲ್ಲಿ ಈರ್ಷ್ಯೆ, ಅಹಂಕಾರ, ದಾಸ್ಯತನಕ್ಕೆ ಅವಕಾಶ ಇರುವುದಿಲ್ಲ. ಆದರೆ, ಇದು ಗಹನವಾದ ಹಾದಿ ಮಾತ್ರವಲ್ಲ ಕಡುಕಷ್ಟದ ಹಾದಿ. ಇಂಥ ಹಾದಿಯನ್ನು ಹಿಡಿದು ನಡೆಯಬೇಕಾದರೆ ಆಂತರಿಕ ವಿಕಾಸಕ್ಕೆ ಎಡೆಮಾಡಿಕೊಡಬೇಕಾಗುತ್ತದೆ. ಈಗಿನ ವಿದ್ಯೆಯು ಪ್ರಲೋಭನಕ್ಕೆ ದಾರಿ ಮಾಡಿಕೊಡುತ್ತಿದೆ. ಇಂಥ ದಾರಿಯನ್ನು ಏಕಲವ್ಯ ಹಿಡಿಯಲಿಲ್ಲ. ಅವನು ದ್ರೋಣರಿಂದ ವಂಚಿತನಾದರೂ ಆಂತರಿಕ ವಿಕಾಸಕ್ಕೆ ಪರೋಕ್ಷವಾಗಿ ದಾರಿ ಮಾಡಿಕೊಟ್ಟಿತು. ಮುಂದೆ ಮಹಾಭಾರತದ ಹಲವು ಘಟನೆಗಳಿಗೆ ಇದು ಕಾರಣವಾಯಿತು. 'ಜ್ಞಾನಲೋಕ' ಸಾಮಾನ್ಯವಾದುದಲ್ಲ. ಇದು ಅರಿವಿನ ನೆಲೆಯ ಕುರುಹನ್ನು ತಂದುಕೊಡಬಲ್ಲ ಸಾಧನ. ನಮ್ಮ ಇಂದಿನ ಎಲ್ಲ ಬಗೆಯ ವಿದ್ಯಾವ್ಯಾಸಂಗಗಳು ಬಾಹ್ಯಚಟುವಟಿಕೆಗಳಿಗೆ ಮೀಸಲಾಗಿದೆ. ಇದು ಹಣ, ಅಧಿಕಾರ ಮುಂತಾದ ಜನಪ್ರಿಯತೆಗಳಿಗೆ ಕಾರಣವಾಗುತ್ತಿದೆ. ನಮಗೆ ಏಕಲವ್ಯ ಪಾತಳಿ ಬೇಕಾಗಿಲ್ಲ; ಅರ್ಜುನ ಪಾತಳಿಯ ನಂಟು ಸಾಕೆಂದುಕೊಳ್ಳುತ್ತಿದ್ದೇವೆ. ಲೋಕಜ್ಞಾನ ನೀಡುವ ವಿದ್ಯೆಯು ಮೋಹವನ್ನು ಕವಿಯಿಸುತ್ತಿದೆ; ಅದು ಆಂತರಿಕ ಎಚ್ಚರವನ್ನು ನೀಡುತ್ತಿಲ್ಲ. ನಮ್ಮದು ಒಂದು ಬಗೆಯ ವಿಷಾದಯೋಗವೇ ಆಗಿದೆ. ನಾವು ಇದರಿಂದ ಪಾರಾಗುವುದು ಅವಶ್ಯವಿದೆ!

ಹೀಗಾಗಿ, ನಮ್ಮ ವಿದ್ಯೆಯ ಪ್ರತೀಕಗಳೂ ರೂಪಕಗಳೂ ಬೇರೆಯಾಗಬೇಕಾಗಿದೆ. ಅತ್ತ ಆರ್ಷೇಯದ ಆಂತರಿಕ ವಿಕಾಸ ಮತ್ತು ಇತ್ತ ವರ್ತಮಾನ, ಭವಿಷ್ಯತ್ತಿನ ಕರ್ಮಪರಿಪಾಕದ ಬಾಹ್ಯವಿಕಾಸ; ಇವೆರಡರ ಸಾಮರಸ್ಯ ನಮಗಿಂದು ಬೇಕಾಗಿದೆ. ಕೇವಲ ಒಂದನ್ನು ನೆಚ್ಚಿಕೊಂಡರೆ ಸುಖವಿಲ್ಲ. ಶ್ರೀಕೃಷ್ಣ ಹೇಳುವ 'ಕರ್ಮಸು ಕೌಶಲಂ' ಕೂಡಾ ಬೇಕಾಗುತ್ತದೆ. ಅರ್ಜುನನ ತಿಳಿವಳಿಕೆಗೆ, ಏಕಲವ್ಯನ ಅರಿವು ದಾರಿತೋರಿಸ ಬೇಕಾಗುತ್ತದೆ. ಇಲ್ಲದಿದ್ದರೆ ನಮ್ಮ ಸಮಾಜ ಹಳವಂಡವಾಗುವುದು ನಿಶ್ಚಿತ. ಕಾಡು ಉಳಿದರೆ, ನಾಡು ಉಳಿದೀತಷ್ಟೆ. ಏಕಲವ್ಯ ಕಾಡಿನ ಪ್ರತೀಕವಾದರೆ; ಅರ್ಜುನ ನಾಡಿನ ಪ್ರತೀಕ. ನಾಡಿನ ಸಂಸ್ಕೃತಿಯು ಇವೆರಡರ ಹಿತದಲ್ಲಿ ಅಥವ ಮೇಳದಲ್ಲಿ ಬೆಳಗುವುದು ಅಗತ್ಯವಿದೆ. ಇದು ಜ್ಞಾನಲೋಕದ ಫಲವಾಗಿದೆ. ಅಂಥ ಫಲದ ಚಿಂತನೆ ನಮ್ಮದಾಗಬೇಕಾಗಿದೆ.

■ ಪುರಂಜೀವಿ

## ಮಾತೇ ಮುತ್ತು

- ಆತ್ಮವಿಶ್ವಾಸ ಅಚಲವಾಗಿರುವವರು ಬೆಟ್ಟವನ್ನು ಅಲುಗಾಡಿಸಬಲ್ಲರು.
  —ಜವಾಹರಲಾಲ್ ನೆಹರು
- ಮೈ ಮರೆಸುವ ಸಂತೋಷ ಸಂಭ್ರಮದಲ್ಲಿ ಪ್ರಮಾದದ ಆಲಸ್ಯಗಳ ಬೀಜಗಳು ಹುದುಗಿಕೊಂಡಿರುತ್ತವೆ.
  —ಡಿವಿಜಿ
- ಸೈನ್ಯದ ಅಧಿಪತಿ ಒಬ್ಬನನ್ನು ಕೊಲ್ಲಬಹುದು; ಆದರೆ ಸಾಮಾನ್ಯನೊಬ್ಬನ ಆಸೆಯನ್ನು ಕೊಲ್ಲುವುದು ಸಾಧ್ಯವಿಲ್ಲ.
  —ಡೇವಿಡ್
- ಉಳ್ಳವರು ಮತ್ತು ಇಲ್ಲದವರ ನಡುವಿನ ಹೋರಾಟವೇ ಇತಿಹಾಸ.
  —ಕಾರ್ಲ್‌ಮಾರ್ಕ್ಸ್
- ಪರೋಪಕಾರವಿಲ್ಲದ ಮನುಜನ ಬಾಳು ಸೆಣಬು ಉರಿದ ಬೂದಿಯಂತಹುದು.
  —ಲಕ್ಷ್ಮೀಶ
- ಜೀವನವು ಮಾನವನ ಅಂತರ್ಯದಿಂದ ಚಿಮ್ಮಿ ಬರುವುದಲ್ಲದೆ ಹೊರಗಿನದಲ್ಲ.
  —ಖಲೀಲ್ ಗಿಬ್ರಾನ್
- ಕಳೆದುಹೋದ ವಿಷಯ ಚಿಂತಿಸಬಾರದು; ಮುಂದೆ ಆಗಲಿರುವ ವಿಷಯ ಚಿಂತಿಸಬಾರದು.
  —ಚಾಣಕ್ಯ
- ಮನುಷ್ಯ ವಿನಾಶದ ಅಂಚಿನಲ್ಲಿದ್ದಾಗಲೂ ಬದುಕಿನ ತಂತು ಎಟುಕೀತೆ ಎಂದು ಅರಸಬೇಕು.
  —ಶಿವರಾಮ ಕಾರಂತ
- ಪರರನ್ನು ಗೌರವಿಸುವುದನ್ನು ಕಲಿಯದಿದ್ದರೆ ನಾವೆಂದೂ ದೊಡ್ಡವರಾಗುವುದಿಲ್ಲ.
  —ವಲ್ಲಭ ಭಾಯಿ ಪಟೇಲ್